† ಶ್ರೀ ಡಿ. ದೇವರಾಜ ಅರಸ್. —ಈಗ ನಾವು ಜಿಲ್ಲಾ ಕಮಿಟಿಗಳನ್ನು ಮಾಡಿದ್ದೇವೆ.

ಶ್ರೀ ಟಿ. ಎಂ. ಮಂಜುನಾಥ.—ಲೋಕಸೇವಾ ಆಯೋಗದವರು ಇಂಜಿನಿಯರುಗಳನ್ನು ಆರಿಸಿದ ಮೇಲೆ ಸರ್ಕಾರದವರು ಅದನ್ನು ರದ್ದು ಮಾಡಿದ್ದಾರೆ. ಇದಕ್ಕೆ ಕಾರಣವೇನೆಂದು ತಿಳಿದುಬಂದಿದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಈ ಪ್ರಶ್ನೆಗೂ ಅದಕ್ಕೂ ಏನು ಸಂಬಂಧ ?

ಶ್ರೀ ಎಂ. ಎಸ್. ಕೃಷ್ಣನ್.—ಈ ಲೋಕಸೇವಾ ಆಯೋಗದವರ ಶಿಫಾರಸು ಒಪ್ಪಿಕೊಂಡಿಲ್ಲ ವೆಂದು ಹೇಳಿದ್ದೀರಿ. ಅದಕ್ಕೆ ಕಾರಣವೇನೆಂದು ತಿಳಿಸುತ್ತೀರಾ ?

Sri D. DEVARAJ URS.—The Government has got valid reasons in not agreeing to the proposals of the P.S.C. The Government thought that if it is given to the Local Recruitment Committees, the matter would be facilitated more because at one stage when everything was given to the Public Service Commission, there was a lot of delay. That is why nearly 7000 to 8000 local candidates at one stage had to be regularaised. Government is anxious to avoid this kind unpleasantness. By decentralising it, thousands of people had to be interviewd and all this process had to be gone into. Therefore it would be more convenient to get the recruitments done through the District Level Committees.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಈ ಜಿಲ್ಲಾ ರಿಕ್ರುಟ್‌ಮೆಂಟ್ ಕಮಿಟಿಯಲ್ಲಿ ಆಯಾ ಜಿಲ್ಲೆಯಲ್ಲಿರತಕ್ಕಂತಹ ಎಂ.ಎಲ್.ಎ.ಗಳನ್ನು ಸದಸ್ಯರನ್ನಾಗಿ ಮಾಡುತಿ ರೀರಾ ?

ಶ್ರೀ ಡಿ. ದೇವರಾಜ ಅರಸ್.—ಹಾಗೆ ಮಾಡುವುದು ಒಳ್ಳೆಯದಲ್ಲವೆಂದು ನಾವು ತಿಳಿದ ಕೊಂಡಿದ್ದೇವೆ. ನೀವು ಮಾಡಬೇಕೆಂದು ಹೇಳಿದರೆ ಅದನ್ನು ನೋಡೋಣ. ಅಲ್ಲದೆ ಒಂದ ಜಿಲ್ಲೆಯಲ್ಲಿ 10-12 ಸದಸ್ಯರು ಇರುವುದರಿಂದ ಎಲ್ಲರನ್ನೂ ಅದರಲ್ಲಿ ಸೇರಿಸಬೇಕೆಂದು ತಾವು ಹೇಳುತ್ತೀರಾ ?

Sri B. B.SAYANAK.—In answer to (*b*) Government have stated that the recomendation of the Public Service Commision cannot be accepted. Then, what is the use of this P.S.C.?

Sri D. DEVARAJ URS.—This is Pay Commission recomendation but not PSC recomendation.

Sri DODDA THIMMAIAH.—May I know the reasons for abolishing the Recruitment Committee of the Public Health Department ?

Sri D. DEVARAJ URS.—I do not think it is abolished.

Afforestation in Davangere Taluk

32. Smt. NAGAMMA C. KESHAVAMURTHY (Davanagere).—

Will the Minister for Agriculture and Forosts be pleased to state.—

(*a*) the total forest area in Davanagere Taluk ;

(*b*) the total area under taken for afforestation ;

(*c*) the types of trees that are being raised in the said taluk ?

Sri K. H. PATIL (Minister for Agriculture and Forests).—

(*a*) 2,282 Hectares

(b) 232 Hectares and 33½ K. M. along Bhadra Channel.

(c) Eucalyptus, Bage, Honge, Hunse, Seeme thangadi, Bevu, Karijali, Sisoo, Sandal, Tugli, etc.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—(ಅ) ಪ್ರಶ್ನೆಗೆ ತಾವು 2,482 ಹೆಕ್ಟರು ಅರಣ್ಯ ಪ್ರದೇಶವಿದೆ ಎಂದು ಹೇಳಿದ್ದೀರಿ. ಈ ಪ್ರದೇಶದಲ್ಲಿ ರ್ಯಾಂಡ್‌ಲೆಸ್ ಮತ್ತು ಸ್ಕೈಟ್‌ಲೆಸ್ ಪೀಸೆಂಟ್ಸ್‌ಗೆ ಏನಾದರೂ ರ್ಯಾಂಡ್ ರಿಲೀಸ್ ಮಾಡುವ ಕಾರ್ಯಕ್ರಮ ಇದೆಯೇ ?

†ಶ್ರೀ ಕೆ. ಎಚ್. ಪಾಟೀಲ್.—ಫಾರೆಸ್ಟ್ ರ್ಯಾಂಡಿನಲ್ಲಿ ಸ್ಕೈಟ್‌ಲೆಸ್ ಜನರಿಗೆ ಕೊಡುವ ಕಾರ್ಯಕ್ರಮ ಇಲ್ಲ. ಅಂಥ ಜನರಿಗೆ ಉಳಿದ ಕಡೆ ಜಾಗ ಸಿಗದೆ ಅನಿವಾರ್ಯ ಪ್ರಸಂಗ ಬಂದರೆ, ಆಗ ಫಾರೆಸ್ಟ್ ರ್ಯಾಂಡಿನಲ್ಲಿ ಸ್ಕೈಟ್‌ಲೆಸ್ ಜನರಿಗೆ ಜಾಗ ಕೊಡಬಹುದೆಂದು ಈಗಾಗಲೇ ನಾವು ತಿಳಿಸಿದ್ದೇವೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಹಾಗಾದರೆ ದಾವಣಗೆರೆಯಲ್ಲಿ ಎಷ್ಟು ಎಕರೆ ಜಮೀನು ರಿಲೀಸ್ ಮಾಡುತ್ತೀರಿ ?

ಶ್ರೀ ಕೆ. ಎಚ್. ಪಾಟೀಲ್.—ಸ್ಕೈಟಲೆಸ್ ಜನರಿಗೆ ಬೇರೆ ಕಡೆ ಜಮೀನು ಸಿಗದೆ, ಅವಶ್ಯಕತೆ ಇದ್ದರೆ ಆಗ ಎಷ್ಟು ಅವಶ್ಯಕತೆ ಇದೆ ಅಷ್ಟು ಮಾತ್ರ ರಿಲೀಸ್ ಮಾಡುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಸ್ಕೈಟ್‌ಲೆಸ್ ಜನರಿಗೆ ದಾವಣಗೆರೆಯ ಫಾರೆಸ್ಟ್ ರ್ಯಾಂಡ್ ನಿಂದ ಕೊಡುತ್ತೇವೆಂದು ಹೇಳಿದ್ದೀರಿ. ಅಂದರೆ ಇದನ್ನು ದಾವಣಗೆರೆಯಲ್ಲಿ ಮಾತ್ರ ಕೊಡುತ್ತೀರಾ ಅಥವಾ ಇಡೀ ನಂಸ್ಥಾನಕ್ಕೆ ಅನ್ವಯಿಸುವ ಹಾಗೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಎಲ್ಲಿ ಸ್ಕೈಟ್‌ಲೆಸ್ ಜನರಿಗೆ ರ್ಯಾಂಡ್ ಸಿಗುವುದಿಲ್ಲವೋ, ಅಲ್ಲಿ ಅನಿವಾರ್ಯವಾಗಿ ಫಾರೆಸ್ಟ್ ರ್ಯಾಂಡ್ ಕೊಡಬಹುದೆಂದು ತಿಳಿಸಿದ್ದೇವೆ. ಇದು ಇಡೀ ರಾಜ್ಯಕ್ಕೆ ಅನ್ವಯವಾಗುತ್ತದೆ; ಕೇವಲ ದಾವಣಗೆರೆಗೆ ಮಾತ್ರವಲ್ಲ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಯೂಕಲಿಪ್ಟಸ್‌ಟ್ರೀಸನ್ನು ಅಲ್ಲಿ ಹೆಚ್ಚಿಗೆ ಬೆಳೆಸುವುದರಿಂದ ಬೇರೆ ಮರಗಳನ್ನು ಬೆಳೆಸುವುದಕ್ಕೆ ಅಫೆಕ್ಟ್ ಆಗುತ್ತದೆಂಬ ದೃಷ್ಟಿಯಿಂದ ಇದನ್ನು ತೆಗೆಸುವ ವಿಚಾರ ಇದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಅದು ಸ್ಪೆಂಟಿಸ್ಟ್ಸ್ ಅಭಿಪ್ರಾಯದ ಪ್ರಕಾರ ಸರಿಯಲ್ಲ. ಆದರೂ ಸಹ ಅಲ್ಲಿ ಯೂಕಲಿಪ್ಟಸ್ ಒಂದೇ ಬೆಳೆಯಬಾರದು, ಎಲ್ಲಾ ಮರಗಳನ್ನು ಅಲ್ಲಿ ಬೆಳೆಯಬೇಕೆಂದು ಹೊಸದಾಗಿ ನಲಹೆ ಕೊಟ್ಟಿದೆ.

ಶ್ರೀ ಕಾಗೋಡು ತಿಮ್ಮಪ್ಪ.— ಅಲ್ಲಿ ನೀಲಗಿರಿ ಗಿಡಗಳನ್ನು ಹೆಚ್ಚಿಗೆ ಬೆಳೆಸುವುದರಿಂದ ಇಡೀ ವಾತಾವರಣ ಡ್ರೈಯಪ್ ಆಗುತ್ತದೆ, ಭೂಮಿಯಲ್ಲಿನ ನೀರಿನ ಅಂಶವೂ ಸಹ ಕಡಿಮೆಯಾಗುತ್ತದೆಂದು ಕೆಲವು ತಜ್ಞರು ಅಭಿಪ್ರಾಯ ಪಡುತ್ತಿರುವುದರಿಂದ ಅದನ್ನು ನೆಡುವುದನ್ನು ಈಗ ಕೈ ಬಿಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಮಾತನ್ನು ನಾನು ಅನೇಕ ಕಡೆ ಗಳಿಂದ ಕೇಳಿದ್ದೇನೆ' ತಜ್ಞರ ಅಭಿಪ್ರಾಯದಲ್ಲಿ ನೀರಿನ ಅಂಶ ಭೂಮಿಯಲ್ಲಿ ಏನೂ ಕಡಿಮೆ ಯಾಗುವುದಿಲ್ಲವೆಂಬುದಾಗಿದೆ. ಯೂಕಲಿಪ್ಟಸ್ ಒಂದೇ ಅಲ್ಲಿ ಬೆಳೆಸುವುದರಿಂದ ಅನೇಕ ಸಾಧನೆ ಗಳಿಗೆ ಅಡ್ಡಿ ಬರುತ್ತದೆಯಾದರೂ ಉಳಿದ ಗಿಡಗಳನ್ನು ಅಲ್ಲಿ ಬೆಳೆಸಬೇಕೆಂದು ತಿಳಿಸಿದ್ದೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಕಾಡಿನಲ್ಲಿ ತೆಂಗಿನ ನಸಿಯನ್ನು ಬೆಳೆಸುವ ಯೋಜನೆ ಏನಾದರೂ ಇದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಫಾರೆಸ್ಟ್‌ನಲ್ಲಿ ಬೆಳೆಸುವ ಮರಗಳಿಗೂ ಮತ್ತು ತೆಂಗಿನ ಗಿಡ ಗಳಿಗೂ ಬಹಳ ವ್ಯತ್ಯಾಸವಿದೆ.